ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 20-24
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಆದಿ ಲಿಂಗಾಯತ ಸಮುದಾಯದ ಪರಿವರ್ತನೆ : ಧಾರ್ಮಿಕ ಮತ್ತು ಸಾಮಾಜಿಕ ಆಯಾಮಗಳು

**ಶಾಂತಮಲ್ಲಪ್ಪ[1] ಮತ್ತು ಡಾ. ಕೃಪಾಲಿನಿ ಹೆಚ್.ಎಸ್[2]**

[1]ಸಂಶೋಧನಾ ವಿದ್ಯಾರ್ಥಿ, ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ, ಶಿವಮೊಗ್ಗ

[2]ಸಹ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ

**Abstract:**

*ಸಮಾಜದಲ್ಲಿ ಮಾನವರು ಸಂವಹನ ನಡೆಸುವ ಮತ್ತು ಒಟ್ಟಿಗೆ ವಾಸಿಸುವ ಸಂಸ್ಥೆಗಳು ವಿಶಿಷ್ಟ ಸಾಮಾಜಿಕ ರಚನೆಯಾಗಿದೆ. ಸಾಮಾಜಿಕ ರಚನೆ ಸಾಮಾಜಿಕ ಬದಲಾವಣೆಯ ರೂಪವಾಗಿ ಕಂಡುಬರುತ್ತದೆ. ಸಾಮಾಜಿಕ ಜೀವನದಲ್ಲಿನ ಕ್ರಮಬದ್ಧತೆಗಳನ್ನು ಸೂಚಿಸುವುದರ ಮೂಲಕ ಅಸಮಾನತೆಯ ಆಯಾಮಗಳು ಪ್ರತಿರೋಧಿಸುತ್ತವೆ. ಸಾಮಾಜಿಕ ರಚನೆಯಲ್ಲಿ ಪ್ರಮುಖವಾಗಿ ಜಾತಿಯನ್ನು ಅವಲೋಕಿಸಿದಾಗ ಸಾಮಾಜಿಕ ಸಂಬಂಧಗಳಲ್ಲಿ ಅದು ತನ್ನ ನೆಲೆಯನ್ನು ಕಂಡುಕೊಳ್ಳುವಲ್ಲಿ ಹಾಗೂ ಜಾತಿಯು ಸ್ತರವ್ಯವಸ್ಥೆಯಲ್ಲಿ ಮಹತ್ವದ ಪಾತ್ರವಹಿಸಿದೆ. ಅಂತಹ ಜಾತಿ ವ್ಯವಸ್ಥೆಯಲ್ಲಿ ಆದಿಲಿಂಗಾಯತ ಜಾತಿಯು ತನ್ನ ಅಸ್ಮಿತೆಯನ್ನು ಕಂಡುಕೊಂಡಿದೆ. ಧಾರ್ಮಿಕವಾಗಿ ಲಿಂಗಾಯತ ತತ್ವದಡಿಯಲ್ಲಿ ಬರುವ ಆದಿಲಿಂಗಾಯತರು ಎಲ್ಲಾ ಲಿಂಗಾಯತರು ಒಂದೇ ಎಂಬ ಮನೋಭಾವ ಹೊಂದಿದ್ದರೂ ಕೂಡ ತಮ್ಮ ಪ್ರತ್ಯೇಕತೆ, ಸಾಮಾಜಿಕ ಒಳಗೊಳ್ಳುವಿಕೆ, ಆಚರಣೆ ಸಂಪ್ರದಾಯಗಳಲ್ಲಿ ವಿವಿಧ ರೀತಿಯಲ್ಲಿ ವ್ಯತ್ಯಾಸ ಹೊಂದಿದ್ದಾರೆ. ಪ್ರಸ್ತುತ ಅಧ್ಯಯನವು ಆದಿ ಲಿಂಗಾಯತರಲ್ಲಿನ ಸಾಮಾಜಿಕ ಮತ್ತು ಧಾರ್ಮಿಕ ಪರಿವರ್ತನೆಗಳು, ಸಾಮಾಜಿಕ ಸಂರಚನೆಯಲ್ಲಿ ಸಂಚಲನೆಯಲ್ಲಿ ಉಂಟುಮಾಡಿರುವ ಬದಲಾವಣೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಈ ಹಿನ್ನೆಲೆಯಲ್ಲಿ ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಆದಿ ಲಿಂಗಾಯತ ಸಮುದಾಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.*

**Keywords:** *ಆದಿ ಲಿಂಗಾಯತ, ಸಂರಚನೆ, ಪರಿವರ್ತನೆ, ಒಳಗೊಳ್ಳುವಿಕೆ*

## ಪೀಠಿಕೆ

ಭಾರತದಲ್ಲಿ ಜಾತಿ ವ್ಯವಸ್ಥೆಯು ಜಾತಿಗಳನ್ನು ಆಧರಿಸಿದ ಸಾಮಾಜಿಕ ವರ್ಗೀಕರಣದ ಮಾದರಿ ಜನಾಂಗೀಯ ಉದಾಹರಣೆಯಾಗಿದೆ. ಜಾತಿಯು ಸಾಮಾಜಿಕ ಸಂಘಟನೆಯ ಪ್ರಬಲ ಅಂಶವಾಗಿದೆ. ಭಾರತೀಯ ಸಮಾಜದ ಹಲವಾರು ಜಾತಿಗಳ ವಿವಿಧ ಗುಂಪುಗಳ ಅಧ್ಯಯನವು ಪ್ರಸ್ತುತದಲ್ಲಿ ಮಹತ್ವ ಪಡೆದುಕೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರಮುಖವಾಗಿ ಆದಿ ಲಿಂಗಾಯತ ಸಮುದಾಯ ಕುರಿತಾದ ಅಧ್ಯಯನವು ವಿಶಿಷ್ಟವಾದುದಾಗಿದೆ. ಲಿಂಗಾಯತ ಧರ್ಮಿಯರ ಮೂಲ ಸ್ವಭಾವವೇ

**Please cite this article as:** ಶಾಂತಮಲ್ಲಪ್ಪ ಮತ್ತು ಕೃಪಾಲಿನಿ ಹೆಚ್.ಎಸ್. (2025). ಆದಿ ಲಿಂಗಾಯತ ಸಮುದಾಯದ ಪರಿವರ್ತನೆ: ಧಾರ್ಮಿಕ ಮತ್ತು ಸಾಮಾಜಿಕ ಆಯಾಮಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(3), 20–24

ಭಿನ್ನತೆ ಅವರಿವರೆನ್ನದೇ ಜೀವನೋಪಾಯಕ್ಕಾಗಿ ವಿವಿಧ ಕುಟುಂಬಗಳನ್ನು ಕ್ರಮಿಸಿದ್ಧ ಪ್ರಜೆಗಳನ್ನೆಲ್ಲಾ ಒಗ್ಗೂಡಿಸಿ ಅವರ ಕಿವಿಗಳಲ್ಲಿ ಅಷ್ಟಾವರಣ, ಪಂಚಾಚಾರಗಳ ಮಂತ್ರವನ್ನೂದಿ ಕಾಯಕ ದಾಸೋಹ ಪ್ರಸಾದ ಸಮಾನತೆಗಳಂತಹ ಮೌಲ್ಯಿಕ ತತ್ವಾಧಾರಿತ ಹೊಸ ಸಮಾಜದ ಸೃಷ್ಟಿಗೆ ಕಾರಣರಾದ ಬಸವಣ್ಣನವರು ಇಡೀ ಸಂಸ್ಕೃತಿಯನ್ನು ತಿರಸ್ಕರಿಸಿ ದೇಹವನ್ನು ದೇಗುಲವಾಗಿಸಿ ಏಕದೇವೋಪಾಸನೆಯ ಸರಳ ಸೂತ್ರಗಳನ್ನು ಬೋಧಿಸಿದರು. ಹಾಗಾಗಿ ಅವರ ಅನುಯಾಯಿಗಳು ಹಾಗೂ ಪಾಲಕರಾದ ಲಿಂಗಾಯತರು ಇಂದಿಗೂ ಇವುಗಳನ್ನು ಮುನ್ನಡೆಸುತ್ತಿರುವುದು ಸಾಮಾಜಿಕ ಬದಲಾವಣೆಯ ಪ್ರಬುದ್ಧ ಸಮಾಜದ ಒಂದು ಅಂಶವಾಗಿದೆ. ಹಾಗಾಗಿ ಧಾರ್ಮಿಕ ಮತ್ತು ಸಾಮಾಜಿಕ ಆಯಾಮಗಳಲ್ಲಿನ ಭಾರತೀಯ ಜಾತಿವ್ಯವಸ್ಥೆಯು ಹಲವಾರು ರೀತಿಯಲ್ಲಿ ಬದಲಾಗುತ್ತಾ ಬಂದಿದೆ. ಲಿಂಗಾಯತರಲ್ಲಿನ ಅನೇಕ ಬದಲಾವಣೆಗಳು ಸಾಮಾಜಿಕ ಪರಿವರ್ತನೆಯ ಅಂಶಗಳಾಗಿವೆ.

**ಸಾಹಿತ್ಯಾವಲೋಕನ**

ಚಿದಾನಂದಮೂರ್ತಿ, ಎಂ. (1986) **"ಲಿಂಗಾಯತ ಅಧ್ಯಯನಗಳು",** ಈ ಕೃತಿಯಲ್ಲಿ ಲಿಂಗಾಯತ ಸಾಹಿತ್ಯ, ಧರ್ಮ, ಸಂಸ್ಕಾರಗಳು ಸಮಾಜದಲ್ಲಿ ಹೇಗಿವೆ ಎಂಬುದನ್ನು ತಿಳಿಸುವುದರ ಜೊತೆಗೆ ಲಿಂಗಾಯತರ ಮೂಲ ಹಾಗೂ ಬೆಳವಣಿಗೆ ತಿಳಿಯಲು ಸಹಾಯಕವಾಗಿದೆ. ಅಲ್ಲದೆ ಲಿಂಗಾಯತರ ಮೂಲ ಪ್ರಗತಿಯ ಬಗ್ಗೆ ತಿಳಿಯಲು ಸಹಕಾರಿಯಾಗಿದೆ. ಲಿಂಗಾಯತ ಸಮುದಾಯವು ಒಂದು ಚಳವಳಿಯ ಒಂದು ರೂಪ ಎಂದು ತಿಳಿಯಲಾಗಿದೆ ಎಂಬುದಾಗಿ ಇದರಲ್ಲಿ ವಿವರಿಸಿದ್ದಾರೆ.

ಕಲಬುರ್ಗಿ ಎಂ.ಎಂ. (2009) **"ಲಿಂಗಾಯತ",** ಈ ಗ್ರಂಥದಲ್ಲಿ ಲಿಂಗಾಯತ, ವೀರಶೈವ ಪದಗಳನ್ನು ಇಂದು ಪರ್ಯಾಯವೆಂಬಂತೆ ಬಳಸುತ್ತಾ ಬರೆಯಲಾಗಿದೆ. ಈ ಪದಗಳು ನೈಜತೆಯ ಅರ್ಥದಲ್ಲಿ ಪರ್ಯಾಯ ಪದಗಳೇ? ಇವುಗಳಲ್ಲಿ ಯಾವುದು ಪ್ರಾಚೀನ? ಎಂಬ ಪ್ರಶ್ನೆಗಳು ಕಳೆದ ಶತಮಾನದ ಆರಂಭದಿಂದಲೂ ಉದ್ಭವಿಸಿವೆ ಎಂಬ ವಿಚಾರಗಳನ್ನು ಈ ಗ್ರಂಥದಲ್ಲಿ ತಿಳಿಸಿದ್ದಾರೆ.

ಶಶಿಕಾಂತ ಸಂಗನಾಳ್ ಮಠ್ (1992) ರವರು ವೀರಶೈವಿಸಮ್ ಎಂಬ ಆಂಗ್ಲ ಗ್ರಂಥದಲ್ಲಿ ವೀರಶೈವ ಧರ್ಮವನ್ನು ಬಸವಣ್ಣನವರು ಸ್ಥಾಪಿಸಿ ಲಿಂಗಾಯತರ ತತ್ವಗಳನ್ನು ಮತ್ತು ನಂಬಿಕೆಗಳನ್ನು ಜನರು ಬಹಳ ಸರಳವಾದ ರೀತಿಯಲ್ಲಿ ಬೋಧಿಸಿದರು. ಇದರಿಂದ 12ನೇ ಶತಮಾನದಲ್ಲಿ ಶಾಂತಿ ಸೌಹಾರ್ದತೆಯು ಹರಡಿತು. ಬಸವಣ್ಣನವರು ಲಿಂಗಾಯತ ಸಮುದಾಯಕ್ಕೆ ಸಿದ್ಧಾಂತ ಮತ್ತು ತತ್ವಗಳನ್ನು ತಲುಪಿಸುವ ಕೆಲಸವನ್ನು ಮಾಡಿದ್ದಾರೆಂದು ತಿಳಿಸಿದ್ದಾರೆ.

**ಅಧ್ಯಯನದ ಉದ್ದೇಶಗಳು**

1. ಆದಿ ಲಿಂಗಾಯತರ ಸಾಮಾಜಿಕ ಬದಲಾವಣೆಯನ್ನು ತಿಳಿಯುವುದು.
2. ಆದಿ ಲಿಂಗಾಯತರ ಧಾರ್ಮಿಕ ಆಚರಣೆಗಳನ್ನು ವಿಶ್ಲೇಷಿಸುವುದು.

**ಸಂಶೋಧನಾ ಸಮಸ್ಯೆಯ ಹೇಳಿಕೆ**

ಪ್ರಸ್ತುತ ಸಂಶೋಧನಾ ಅಧ್ಯಯನ ವಿಷಯವಾದ **"**ಆದಿ ಲಿಂಗಾಯತ ಸಮುದಾಯದ ಪರಿವರ್ತನೆ : ಧಾರ್ಮಿಕ ಮತ್ತು ಸಾಮಾಜಿಕ ಆಯಾಮಗಳು**"** ಎಂಬ ಸಂಶೋಧನಾ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**ಜನಸಂಖ್ಯೆ ಮಾದರಿ**

ಪ್ರಸ್ತುತ ಅಧ್ಯಯನಕ್ಕಾಗಿ ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನ 40 ಜನ ಆದಿ ಲಿಂಗಾಯತ ಸಮುದಾಯದವರನ್ನು ಅಧ್ಯಯನದ ಮಾದರಿಯನ್ನಾಗಿ ಆಯ್ಕೆಮಾಡಿಕೊಳ್ಳಲಾಗಿದ್ದು, ಸಂಶೋಧನೆಗೆ ಅಗತ್ಯವಾದ ಮಾಹಿತಿಯನ್ನು ಸಂದರ್ಶನ ಅನುಸೂಚಿಯ ಮೂಲಕ ಕಲೆ ಹಾಕಲಾಗಿದೆ. ಅಧ್ಯಯನಕ್ಕೆ ಸರಳ ಯಾದೃಚ್ಛಿಕ ಮಾದರಿ ವಿಧಾನವನ್ನು ಬಳಸಿಕೊಳ್ಳಲಾಗಿದೆ.

**ಸಂಶೋಧನಾ ವಿಧಾನ ಮತ್ತು ತಂತ್ರಗಳು**

ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಣೆಗಾಗಿ ವೈಜ್ಞಾನಿಕ ತಂತ್ರ ವಿಧಾನಗಳನ್ನು ಬಳಸಿಕೊಂಡು ಕ್ಷೇತ್ರಾಧ್ಯಯನ ಕೈಗೊಳ್ಳಲಾಗಿದೆ. ಇದರಿಂದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸ್ವರೂಪದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಂಶೋಧನೆಗೆ ಅಗತ್ಯವಿರುವ ಮಾಹಿತಿಯನ್ನು ಸಂಗ್ರಹಿಸಲು ಮಾಹಿತಿದಾರರಿಗೆ ಸಂದರ್ಶನ ಅನುಸೂಚಿಯನ್ನು ಮಾರ್ಗದರ್ಶಕರ, ವಿಷಯ ಪರಿಣಿತರ, ತಜ್ಞರ ಸಹಾಯದಿಂದ ರೂಪಿಸಿ, ಪೂರ್ವ ಪರೀಕ್ಷೆಗೆ ಒಳಪಡಿಸಿ, ಮಾಹಿತಿ ಸಂಗ್ರಹಿಸಲಾಗಿದೆ.

**ಮಾಹಿತಿ ಸಂಗ್ರಹಣೆಯ ಮೂಲಗಳು**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಪ್ರಾಥಮಿಕ ಮೂಲ ಮತ್ತು ಆನುಷಂಗಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ ಅನುಸೂಚಿ ಮತ್ತು ಕ್ಷೇತ್ರಕಾರ್ಯ ವಿಧಾನ ಬಳಸಿಕೊಂಡು ಸಂಗ್ರಹಿಸಲಾತದೆ. ಆನುಷಂಗಿಕ ಮಾಹಿತಿಯನ್ನು ಪ್ರಕಟಿತ ಪುಸ್ತಕಗಳು, ಲೇಖನಗಳು, ಗ್ರಂಥಗಳು, ಪ್ರಬಂಧಗಳು, ದಿನಪತ್ರಿಕೆಗಳು, ಮಾಸಿಕ ಪತ್ರಿಕೆಗಳು, ಕುಲಬುರಗಿ ಜಿಲ್ಲಾ ಅಂಕಿ–ಅಂಶಗಳ ನೋಟ, ವಿಶ್ವಕೋಶಗಳು, ಜನಗಣತಿ ದಾಖಲಾತಿ, ಅಂತರ್ಜಾಲ ಹಾಗೂ ನಿಯತಕಾಲಿಕೆಗಳು ಮುಂತಾದ ಮೂಲಗಳಿಂದ ಸಂಗ್ರಹಿಸಲಾಗಿದೆ.

**ಮಾಹಿತಿ ವಿಶ್ಲೇಷಣೆ**

ಮೇಲೆ ತಿಳಿಸಿದ ಸಂಶೋಧನಾ ವಿಧಾನಗಳು, ತಂತ್ರಗಳು ಹಾಗೂ ವಿವಿಧ ಮೂಲಗಳಿಂದ ಸಂಗ್ರಹಿಸಿದ ಸಂಶೋಧನಾ ಮಾಹಿತಿಯನ್ನು ಪರಿಮಾಣಾತ್ಮಕವಾಗಿ ಹಾಗೂ ಗುಣಾತ್ಮಕ ವಿಧಾನದಿಂದ ವಿಶ್ಲೇಷಿಸಿ, ಸಂಕೇತಿಕರಣ, ಪರಿಷ್ಕರಣೆ, ವರ್ಗೀಕರಣ ಹಾಗೂ ಸೂಚೀಕರಣದ ಮೂಲಕ ಹಾಗೂ ಅಗತ್ಯವಿದ್ದಷ್ಟು ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿಕೊಂಡು ಸಮಾಜಶಾಸ್ತ್ರೀಯ ಚೌಕಟ್ಟಿನಲ್ಲಿ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

**ಕೋಷ್ಟಕ 1: ಧಾರ್ಮಿಕ ಆಚರಣೆಗಳನ್ನು ಆಚರಿಸುವ ಕುರಿತು ಮಾಹಿತಿದಾರರ ಅಭಿಪ್ರಾಯ**

| ಅಭಿಪ್ರಾಯ | ಆವೃತ್ತಿ | ಶೇಕಡವಾರು |
|---|---|---|
| ಹೌದು | 28 | 70 |
| ಇಲ್ಲ | 12 | 30 |
| ಒಟ್ಟು | 40 | 100.00 |
| **ಆಚರಿಸುವ ಆಚರಣೆ** | **ಆವೃತ್ತಿ (n=28)** | **ಶೇಕಡವಾರು** |
| ಬಸವ ಜಯಂತಿ | 08 | 28.50 |
| ಯುಗಾದಿ | 12 | 42.85 |
| ದೀಪಾವಳಿ | 07 | 25.00 |
| ಮಹಾನವಮಿ | 06 | 21.42 |

ಧಾರ್ಮಿಕ ಆಚರಣೆಗಳನ್ನು ಆಚರಿಸುವ ಕುರಿತು ಮಾಹಿತಿದಾರರ ಅಭಿಪ್ರಾಯದ ವಿವರವನ್ನು ಈ ಮೇಲಿನ ಕೋಷ್ಟಕದಲ್ಲಿ ನೀಡಲಾಗಿದೆ. ಸಂದರ್ಶಿತ ಒಟ್ಟು 40 ಜನ ಸಂದರ್ಶಿತರಲ್ಲಿ ಶೇಕಡ 70ರಷ್ಟು ಸಂದರ್ಶಿತರು ತಾವು ಧಾರ್ಮಿಕ ಆಚರಣೆಗಳನ್ನು ಆಚರಿಸುವುದಾಗಿ ತಿಳಿಸಿದ್ದು ಉಳಿದ ಶೇಕಡ 30ರಷ್ಟು ಸಂದರ್ಶಿತರು ತಾವು ಧಾರ್ಮಿಕ ಆಚರಣೆಗಳನ್ನು ಆಚರಿಸುವುದಿಲ್ಲ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಈ ಮೇಲಿನ ಕೋಷ್ಟಕದಿಂದ ವ್ಯಕ್ತವಾಗುವುದೇನೆಂದರ ಧಾರ್ಮಿಕ ಆಚರಣೆಗಳನ್ನು ತಮ್ಮ ಮಾನಸಿಕ ನೆಮ್ಮದಿ, ಸಂಸ್ಕೃತಿಗಳನ್ನು ಮುಂದುವರೆಸಿಕೊಂಡು ಹೋಗಲು ಈ ಹಬ್ಬ ಹರಿದಿನಗಳನ್ನು ಧಾರ್ಮಿಕ ಆಚರಣೆಯನ್ನಾಗಿ ಆಚರಿಸುತ್ತಿದ್ದಾರೆ.

ಧಾರ್ಮಿಕ ಆಚರಣೆಗಳಲ್ಲಿ ಬದಲಾವಣೆ ಗಳಾಗಿರುವುದರ ಕುರಿತು ಮಾಹಿತಿದಾರರ ಅಭಿಪ್ರಾಯದ ವಿವರವನ್ನು ಕೋಷ್ಟಕ 2ರಲ್ಲಿ ನೀಡಲಾಗಿದೆ. ಸಂದರ್ಶಿತ ಒಟ್ಟು 40 ಜನ ಸಂದರ್ಶಿತರಲ್ಲಿ ಶೇಕಡ 85ರಷ್ಟು ಸಂದರ್ಶಿತರು ತಮ್ಮ ಧಾರ್ಮಿಕ ಆಚರಣೆಗಳಲ್ಲಿ

ಬದಲಾವಣೆಗಳಾಗಿರುವುದಾಗಿ ತಿಳಿಸಿದ್ದು ಉಳಿದ ಶೇಕಡ 15ರಷ್ಟು ಸಂದರ್ಶಿತರು ತಮ್ಮ ಧಾರ್ಮಿಕ ಆಚರಣೆಗಳಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ

**ಕೋಷ್ಟಕ 2 : ಧಾರ್ಮಿಕ ಆಚರಣೆಗಳಲ್ಲಿ ಬದಲಾವಣೆಗಳಾಗಿರುವುದರ ಕುರಿತು ಮಾಹಿತಿದಾರರ ಅಭಿಪ್ರಾಯ**

| **ಅಭಿಪ್ರಾಯ** | **ಆವೃತ್ತಿ** | **ಶೇಕಡವಾರು** |
|---|---|---|
| ಹೌದು | 34 | 85.00 |
| ಇಲ್ಲ | 06 | 15.00 |
| ಒಟ್ಟು | 40 | 100.00 |
| **ಬದಲಾವಣೆಗಳಾಗಿರುವ ಸಂದರ್ಭಗಳು** | **ಆವೃತ್ತಿ (n=34)** | **ಶೇಕಡವಾರು** |
| ಉಡುಗೆ ತೊಡುಗೆ | 10 | 29.41 |
| ಆಹಾರ ಪದ್ಧತಿ | 18 | 52.94 |
| ಪೂಜಾ ಕ್ರಮ | 20 | 58.82 |

ಈ ಮೇಲಿನ ಕೋಷ್ಟಕದಿಂದ ವ್ಯಕ್ತವಾಗುವುದೇನೆಂದರ ಇತ್ತೀಚಿನ ದಿನಗಳಲ್ಲಿ ಮಾಹಿತಿದಾರರ ಉಡುಗೆ ತೊಡುಗೆಗಳಿಂದ ಹಿಡಿದು ತಮ್ಮ ಪೂಜಾ ಕ್ರಮದವರೆಗಿನ ಎಲ್ಲಾ ಅಂಶಗಳು ಆಧುನಿಕ ಜೀವನಶೈಲಿ ಹಾಗೂ ಒತ್ತಡದಂತಹ ಅಂಶಗಳು ಧಾರ್ಮಿಕ ಆಚರಣೆಗಳಲ್ಲಿ ಬದಲಾವಣೆಗಳನ್ನು ತಂದಿವೆ. ಕೇವಲ ಒಂದು ಆಚರಣೆಯಾಗಿ ಆಚರಿಸುವುದನ್ನು ಬಿಟ್ಟರೆ ಆಚರಣೆಗಳಿಗೆ ಯಾವುದೇ ಮೌಲ್ಯಾಧಾರಿತ ಭಾವನೆಗಳು ತೋರದಿರುವುದರಿಂದ ಬದಲಾವಣೆಗಳು ಅನಿವಾರ್ಯವಾಗಿರುವುದು ಸಂಶೋಧನೆಯಿಂದ ಕಂಡುಬಂದಿದೆ.

**ಕೋಷ್ಟಕ 3 ಆದಿ ಲಿಂಗಾಯತರಲ್ಲಿ ಸಾಮಾಜಿಕ ಬದಲಾವಣೆಗಳಾಗಿರುವುದರ ಕುರಿತು ಮಾಹಿತಿದಾರರ ಅಭಿಪ್ರಾಯ**

| **ಅಭಿಪ್ರಾಯ** | **ಆವೃತ್ತಿ** | **ಶೇಕಡವಾರು** |
|---|---|---|
| ಹೌದು | 35 | 87.05 |
| ಇಲ್ಲ | 05 | 12.05 |
| ಒಟ್ಟು | 40 | 100.00 |

ಆದಿ ಲಿಂಗಾಯತರ ಸಾಮಾಜಿಕ ಬದಲಾವಣೆಗಳಾಗಿರುವುದರ ಕುರಿತು ಮಾಹಿತಿದಾರರ ಅಭಿಪ್ರಾಯದ ವಿವರವನ್ನು ಕೋಷ್ಟಕ 3ರಲ್ಲಿ ತಿಳಿಸಲಾಗಿದೆ. ಸಂದರ್ಶಿತ ಒಟ್ಟು 40 ಜನ ಮಾಹಿತಿದಾರರಲ್ಲಿ ಶೇಕಡ 87.05ರಷ್ಟು ಸಂದರ್ಶಿತರು ಆದಿ ಲಿಂಗಾಯಿತರಲ್ಲಿ ಸಾಮಾಜಿಕ ಬದಲಾವಣೆಗಳಾಗಿರುವುದಾಗಿ ತಿಳಿಸಿದ್ದು ಉಳಿದಂತೆ ಶೇಕಡ 12.05ರಷ್ಟು ಸಂದರ್ಶಿತರು ಆದಿ ಲಿಂಗಾಯಿತರಲ್ಲಿ ಯಾವುದೇ ಸಾಮಾಜಿಕ ಬದಲಾವಣೆಗಳಾಗಿಲ್ಲದಿರುವುದಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಮಾಹಿತಿದಾರರು ತಮ್ಮ ಸಾಮಾಜಿಕ ಬದಲಾವಣೆಗಳಿಗೆ ಹಲವಾರು ಅಂಶಗಳು ಕಾರಣವಾಗಿವೆ. ಸಮಾಜದಲ್ಲಿನ ಆಧುನಿಕ ಪ್ರಕ್ರಿಯೆಗಳು ಸಾಮಾಜಿಕ ಬದಲಾವಣೆ ಹೊಂದುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಪ್ರಸ್ತುತ ಸಂಶೋಧನೆಯಿಂದ ಕಂಡುಬಂದಿದೆ.

**ಅಧ್ಯಯನದಿಂದ ವ್ಯಕ್ತವಾದ ಅಂಶಗಳು**

1. ಶೇಕಡ 70ರಷ್ಟು ಮಾಹಿತಿದಾರರು ತಾವು ಧಾರ್ಮಿಕ ಆಚರಣೆಗಳನ್ನು ಆಚರಿಸುವುದಾಗಿ, ಉಳಿದ ಶೇಕಡ 70ರಷ್ಟು ತಾವು ಧಾರ್ಮಿಕ ಆಚರಣೆಗಳನ್ನು ಆಚರಿಸುವುದಿಲ್ಲ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.
2. ಶೇಕಡ 85ರಷ್ಟು ಮಾಹಿತಿದಾರರು ತಮ್ಮ ಧಾರ್ಮಿಕ ಆಚರಣೆಗಳಲ್ಲಿ ಬದಲಾವಣೆಗ ಳಾಗಿರುವುದಾಗಿ ತಿಳಿಸಿದ್ದು, ಶೇಕಡ 15ರಷ್ಟು ತಮ್ಮ ಧಾರ್ಮಿಕ ಆಚರಣೆಗಳಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ ಎಂದು ತಿಳಿಸಿದ್ದಾರೆ.
3. ಶೇಕಡ 87.05ರಷ್ಟು ಸಂದರ್ಶಿತರು ಆದಿ ಲಿಂಗಾಯತರಲ್ಲಿ ಸಾಮಾಜಿಕ ಬದಲಾವಣೆಗಳಾಗಿರುವುದಾಗಿ ತಿಳಿಸಿದ್ದು,

ಉಳಿದಂತೆ ಶೇಕಡ 12.05ರಷ್ಟು ಆದಿ ಲಿಂಗಾಯತರಲ್ಲಿ ಯಾವುದೇ ಸಾಮಾಜಿಕ ಬದಲಾವಣೆಗಳಾಗಿಲ್ಲದಿರುವುದಾಗಿ ತಿಳಿಸಿದ್ದಾರೆ.

**ಉಪಸಂಹಾರ**

ಒಟ್ಟಾರೆಯಾಗಿ ಆದಿ ಲಿಂಗಾಯತ ಸಮುದಾಯವು ಇತ್ತೀಚಿನ ದಿನಗಳಲ್ಲಿನ ಜಾಗತಿಕ ಅಂಶಗಳು ಆಧುನಿಕ ಜೀವನಶೈಲಿಯಂತಹ ಅನೇಕ ಪರಿಣಾಮಗಳಿಂದಾಗಿ ಸಾಮಾಜಿಕ ಮತ್ತು ಧಾರ್ಮಿಕ ಬದಲಾವಣೆಗಳಲ್ಲಿ ಬದಲಾವಣೆಗಳಾಗುತ್ತಿವೆ ಹಾಗೂ ತೀರಾ ಇತ್ತೀಚಿನ ಪ್ರವೃತ್ತಿಗಳು ಸಮುದಾಯದ ವಿಘಟನೆಗೂ ಕಾರಣವಾಗಬಹುದು. ಈ ಹಿನ್ನೆಲೆಯಲ್ಲಿ ಸಮುದಾಯದ ಐಕ್ಯತೆ ಮತ್ತು ಸಮಗ್ರತೆಗಳು ಅತ್ಯಂತ ಪ್ರಮುಖವಾಗಿ ಪಾತ್ರವನ್ನು ವಹಿಸುತ್ತವೆ ಎದು ಹೇಳಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಪರಾಜ, ಆರ್.ಪಿ. (2010). *ಲಿಂಗಾಯತ ಆಧುನಿಕ ಸಂದರ್ಭ–ತ್ವರಿತ.* ಆಫ್‌ಸೆಟ್ ಪ್ರಿಂಟರ್ಸ್.
- ಚರಂತಿಮಠ, ವಿ.ಎಸ್. (1992). *ಅನುಭಾವ ಮಂಟಪದಲ್ಲಿ ವೀರಶೈವ ಸಂಸ್ಕೃತಿ.* ಶ್ರೀ ಚನ್ನಬಸವೇಶ್ವರ ಸಂಸ್ಥಾನ.
- ಚಿದಾನಂದಮೂರ್ತಿ, ಎಂ. (1986). *ಲಿಂಗಾಯತ ಅಧ್ಯಯನಗಳು.* ವಾಗ್ದೇವಿ ಪುಸ್ತಕಗಳು.
- ಕಲಬುರ್ಗಿ, ಎಂ.ಎಂ. (2009). *ಲಿಂಗಾಯತ.* ಬಸವ ಸಮಿತಿ.
- ಕಾಶಿನಾಥ ಅಂಬಲಗೆ. (2006). *ಶರಣರು ಹಾಗೂ ಸಂತರ ಸಾಮಾಜಿಕ ಕಾಳಜಿ,* ಕನ್ನಡ ಸಾಹಿತ್ಯ ಪರಿಷತ್ತು.
- ನಾಗಭೂಷಣ, ಸಿ. (2000). *ಶರಣ ಸಾಹಿತ್ಯ ಸಂಸ್ಕೃತಿ : ಕೆಲವು ಅಧ್ಯಯನಗಳು.* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ನಂದಿಮಠ್ ಸಿ. (2000). *ಎ ಹ್ಯಾಂಡ್ ಬುಕ್ ಆಫ್ ವೀರಶೈವಿಸಂ.* ಮೋತಿಲಾಲ್ ಬನಾರಿದಾಸ್.
- ನಾರಾಯಣ, ಪಿ.ವಿ. (1964). *ವಚನ ಪರಿಸರ.* ಪ್ರಣತಿ ಪ್ರಕಾಶನ.
- ಪಂಡಿತ, ಎಸ್ ಮತ್ತು ಬಸಪ್ಪ. (1977). *ಮರುಳಸಿದ್ಧಕಾವ್ಯ.* ಶ್ರೀ ತರಳಬಾಳು ಮುದ್ರಣಾಲಯ.
- ಥೋವೆನ್, ಎಂ. (1992). *ಬಾಂಬೆ ಪ್ರಾಂತ್ಯದ ಬುಡಕಟ್ಟುಗಳು ಮತ್ತು ಜಾತಿಗಳು.* ಶರಣಶ್ರೀ ಮುರುಘಮಠ.